ಇ) ತಾರೀಖು ೬-೧-೧೯೮೮ರ ಕಬಿನಿ ನೀರಾವರಿ ಸಲಹಾ ಸಮಿತಿ ಸಭೆಯು ಈ ಬಗ್ಗೆ ನಿರ್ಣಯ ಮಾಡಲಾಗಿದೆಯೇ ಮಾಡಿದಲ್ಲಿ ಎರಡು ಭತ್ತದ ಬೆಳೆ ತೆಗೆಯಲು ಸರ್ಕಾರ ಸಂಬಂಧಿಸಿದವರಿಗೆ ಸೂಚನೆ ನೀಡಿರುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಎ) ಕಬಿನಿ ಜಲಾಶಯದ ಎಡದಂಡೆ ನಾಲೆಯ ಆಚ್ಚುಕಟ್ಟು ಪ್ರದೇಶವು ೩,೦೦೦ ಎಕರೆ (೧೨೧೪ ಹೆಕ್ಟೇರ್) ಈ ಪ್ರದೇಶವು ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಸೀಮಿತಗೊಳಿಸಲ್ಪಟ್ಟಿದೆ. ಈ ನಾಲೆಯಿಂದ ಮುಂಗಾರಿನಲ್ಲಿ ಭತ್ತದ ಬೆಳೆಗಾಗಿ ಮತ್ತು ಜಲಾಶಯದ ಶೇಖರಣೆಗೆ ಅನುಸಾರವಾಗಿ ಹಿಂಗಾರಿನಲ್ಲಿ ಬೇಸಿಗೆ ಬೆಳೆಯಾದ ಅವ ನೀರಾವರಿ ಬೆಳೆಗಾಗಿ ನೀರನ್ನು ಒದಗಿಸಲಾಗುತ್ತಿದೆ. ಈ ನಾಲೆಯಿಂದ ವೇಲ್ಯಾಣಿಸಿದ ಬೇಸಿಗೆ ಬೆಳೆಗಳಿಗಾಗಿ ಪ್ರತಿ ಸೆಕೆಂಡಿಗೆ ೬೫ ಘನ ಅಡಿ ನೀರನ್ನು ಬಿಡಲಾಗುತ್ತಿದೆ.

ಆ) ಇಲ್ಲಾ.

ಇ) ನೀರಾವರಿ ಸಲಹಾ ಸಮಿತಿಯಲ್ಲಿ ಚರ್ಚೆಯಾಗಿದೆ. ಸರ್ಕಾರಕ್ಕೆ ಶಿಫಾರಸ್ಸು ಬಂದಿಲ್ಲ.

ಅಪ್ಪರ್ ಮುಲ್ಲಾಮಾರಿಗೆ ಅಧಿಕ ಹಣ ಬಿಡುಗಡೆ

೧೦೫೭. ಶ್ರೀ ಬಸವರಾಜ್ ಪಾಟೀಲ್ ಆನ್ವರಿ (ಆಟ್ಕೂರ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಎ) ಸರ್ಕಾರವು ಇಲ್ಲಿಯವರೆಗೆ ಅಪ್ಪರ್ ಮುಲ್ಲಾಮಾರಿ ಯೋಜನೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ?

ಆ) ಈ ಯೋಜನೆಯಿಂದ ಎಷ್ಟು ಎಕರೆ ಜಮೀನು ನೀರಾವರಿ ಮಾಡಲಾಗಿದೆ ?

ಇ) ತ್ವರಿತಗತಿಯಿಂದ ಈ ಯೋಜನೆ ಪೂರ್ಣಗೊಳಿಸುವ ಸಲುವಾಗಿ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ ತಿಳಿಸುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಎ) ೧೯೮೫ನೇ ಫೆಬ್ರವರಿ ಮಾಹೆಯ ಅಂತ್ಯದವರೆಗೆ ೪೪೧ ಲಕ್ಷ ರೂ.ಗಳು.

ಆ) ಫೆಬ್ರವರಿ ಮಾಹೆಯ ಅಂತ್ಯದವರೆಗೆ ೧೨೫೫ ಹೆಕ್ಟೇರುಗಳು.

ಇ) ಆದ್ಯತೆ ಮೇಲೆ ಈ ಯೋಜನೆಗೆ ಹೆಚ್ಚಳ ಅನುದಾನ ನೀಡಲಾಗಿರುವುದು, ನೀರಾವರಿ ಸೌಲಭ್ಯ ತೀವ್ರಗತಿಯಲ್ಲಿ ಒದಗಿಸುವ ದೃಷ್ಟಿಯಿಂದ ಬರ ಪರಿಹಾರ ಕೇಂದ್ರ ನೆರವಿನ ಅಡಿಯಲ್ಲಿ ಹೆಚ್ಚಳ ಹಣ ಒದಗಿಸುವುದು.

ಬೈಲಹೊಂಗಲ ತಾಲ್ಲೂಕು ಪೈಕಿ ಪುನರ್ ವಸತಿಯ ಸಂಗೊಳ್ಳಿ ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣನ ಮೂರ್ತಿಯನ್ನು ಸ್ಥಾಪಿಸುವುದು

೧೦೫೮. ಶ್ರೀ ಶಿವಾನಂದ ಎಚ್ ಕೌಜಲಗಿ (ಬೈಲಹೊಂಗಲ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ಸಂಗೊಳ್ಳಿ ಗ್ರಾಮವು ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾಗಿದ್ದು ಅಲ್ಲಿ ಇದ್ದ ಸಂಗೊಳ್ಳಿ ರಾಯಣ್ಣನ ಗುಡಿಯು(ಮೂರ್ತಿ ಇದ್ದ ಸಮಾಧಿ) ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸಂಗೊಳ್ಳಿ ರಾಯಣ್ಣನ ಮೂರ್ತಿಯನ್ನು ಉಳಿಸಲು ಸರ್ಕಾರದವರು ಪುನರ್‌ವಸತಿ ಗ್ರಾಮವಾದ ಸಂಗೊಳ್ಳಿಯಲ್ಲಿ ಸ್ಥಾಪಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಕೊಂಡಿದ್ದರು.